**ಸಾಕ್ಷಿಯನ್ನು ದಿ:04.12.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ</u>**

1. ನಾನು ಬಿಎ ಅಪೂರ್ಣಗೊಳಿಸಿದ್ದೇನೆ. ನನ್ನ ತಂದೆ ಹೆಸರು ಟಿ.ಕೆ.ಚಂದ್ರಶೇಖರ. ನನ್ನ ತಾತನ ಹೆಸರು ಟಿ.ಡಿ.ಕೆಂಪೇಗೌಡ. ನನ್ನ ತಂದೆ ಈಗ ಬದುಕಿಲ್ಲ. ನನ್ನ ಅಜ್ಜಿ ಹೆಸರು ಪುಟ್ಟಮ್ಮ. ನ್ನ ತಾತ ಹಾಗೂ ಅಜ್ಜಿ ಈಗ ಬದುಕಿಲ್ಲ.

2. ನನ್ನ ತಾತ ಹಾಗೂ ಅಜ್ಜಿಗೆ ಒಟ್ಟು 9 ಜನ ಮಕ್ಕಳು. 5 ಜನ ಗಂಡು ಹಾಗೂ 4 ಜನ ಹೆಣ್ಣು ಮಕ್ಕಳು. ನನ್ನ ತಂದೆ ಟಿ.ಕೆ.ಚಂದ್ರಶೇಖರ ಹಿರಿಯವರು ಎಂದರೆ ಸರಿ. ನನ್ನ ತಂದೆ ಹೊರತುಪಡಿಸಿ ಉಳಿದ ಮಕ್ಕಳು ಬದುಕಿದ್ದಾರೆ ಎಂದರೆ ಸರಿ.

3. ಕಮಲಮ್ಮ ಎರಡನೇಯವರು. ಅವರನ್ನು ಕುಶಾಲನಗರ ಪಕ್ಕ ಕೂಡಿಗೆಗೆ ಮದುವೆ ಮಾಡಿ ಕೊಡಲಾಗಿದೆ.

4. ಉಳಿದವರು ನಾರಾಯಣ, ವಾಸುದೇವ, ರಾಜಶೇಖರ, ಉಮೇಶ, ಕಮಲಮ್ಮ, ಪ್ರಭಾವತಿ, ಸುಧಾಮಣಿ ಹಾಗೂ ಗಾಯತ್ರಿ.

5. ವಾದಿ ಗಾಯತ್ರಿ ನಿಮ್ಮ ಅತ್ತೆ ಎಂದರೆ ಸರಿ.

6. ನಿಮ್ಮ ತಂದೆಯ ಜೊತೆ ಹುಟ್ಟಿದ ಹೆಣ್ಣುಮಕ್ಕಳು ನಿಮ್ಮ ತಾತನ ಆಸ್ತಿಗೆ ಸಂಬಂಧಪಟ್ಟಂತೆ ಯಾವುದಾದರೂ ಹಕ್ಕು ಖುಲಾಸೆ ಅಥವಾ ವಿಭಾಗಪತ್ರಕ್ಕೆ ಸಹಿ ಮಾಡಿಕೊಟ್ಟಿದ್ದಾರಾ ಎಂದರೆ, ಇಲ್ಲ.

7. ಸ.ನಂ.83 ರಲ್ಲಿ 1 ಎಕರೆ 37 ಗುಂಟೆ ಪುಟ್ಟಮ್ಮನ ಹೆಸರಿಗೆ ಕ್ರಯ ಆಗಿತ್ತು ಎಂದರೆ, ಸರಿಯಲ್ಲ ನಮ್ಮ ತಾತನಿಂದ ಪುಟ್ಟಮ್ಮರವರಿಗೆ ಪೌತಿ ಖಾತೆ ಆಗಿದೆ.

8. ನಿಮ್ಮ ತಾತನ ಹೆಸರಿಗೆ ಕ್ರಯ ಆದ ಬಗ್ಗೆ ಕ್ರಯಪತ್ರ ಹಾಜರುಪಡಿಸಿದ್ದೀರಾ ಎಂದರೆ, ಹಾಜರುಪಡಿಸಿದ್ದೇನೆ. ನಿಮ್ಮ ತಾತನಿಗೆ ಕ್ರಯ ಆಗದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆ ಬಗ್ಗೆ ನೀವು ಕ್ರಯಪತ್ರ ಹಾಜರುಪಡಿಸಿಲ್ಲ ಎಂದರೆ ಸರಿ. ಆರ್.ಟಿ.ಸಿ ಮಾತ್ರ ಬರುತ್ತಿತ್ತು ಎಂದು ನುಡಿಯುತ್ತಾರೆ.

9. ನಿಮ್ಮ ತಾತನ ಹೆಸರಿನ ಪಹಣಿಗಳನ್ನು ಹಾಜರುಪಡಿಸಿದ್ದೀರಾ ಎಂದರೆ, ಇಲ್ಲ.

10. ಪಿ.ಡಿ.ಕೆಂಪೇಗೌಡರ ಹೆಸರಿಗೆ ಕ್ರಯ ಆಗದ ಕಾರಣ ಅವರ ಹೆಸರಿಗೆ ಪಹಣಿ ಇಲ್ಲದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆ ಬಗ್ಗೆ ದಾಖಲೆ ಹಾಜರುಪಡಿಸಲು ತೊಂದರೆ ಇದೆಯಾ ಎಂದರೆ ಹಾಜರುಪಡಿಸುತ್ತೇನೆ.

11. ನಿಮ್ಮ ಅಜ್ಜಿ ಹೆಸರಿಗೆ ಕ್ರಯ ಆಗಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

12. ದಾವಾ ಸ್ವತ್ತನ್ನು ನಾನು ನೋಡಿದ್ದೇನೆ. ಅದರಲ್ಲಿ ನಿಮಗೆ ಭಾಗ ಬರಬೇಕಾ ಎಂದರೆ ಬರಬೇಕು.

13. ದಾವಾ ಸ್ವತ್ತಿನಲ್ಲಿ ನಾನು ಮನೆ ಮತ್ತು ಇತರ ಕಟ್ಟಡ ಕಟ್ಟಿಲ್ಲ. ಸಾಕ್ಷಿ ಮುಂದುವರಿದು ನಮ್ಮ ಚಿಕ್ಕಪ್ಪಂದಿರು ಕಟ್ಟಿದ್ದಾರೆ ಎಂದು ನುಡಿಯುತ್ತಾರೆ. ಆ ಬಗ್ಗೆ ದಾಖಲೆ ಕೊಟ್ಟಿದ್ದೀರಾ ಎಂದರೆ, ಇಲ್ಲ.

14. ನಮ್ಮ ಚಿಕ್ಕಪ್ಪನ ಮಕ್ಕಳು ಬಂದು ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಲ್ಲ.

15. ದಾವಾ ಆಸ್ತಿಯಲ್ಲಿ ಎಲ್ಲರಿಗೂ ಭಾಗ ಬರಬೇಕು ಎಂದರೆ, 5 ಜನ ಗಂಡು ಮಕ್ಕಳಿಗೆ ಮಾತ್ರ ಬರಬೇಕು ಎಂದು ನಮ್ಮ ಅಜ್ಜ ವಿಲ್ ಮಾಡಿದ್ದಾರೆ. ಸದರಿ ವಿಲ್ ಹಾಜರುಪಡಿಸಿದ್ದೇನೆ.

16. ನಿಮ್ಮ ಅಜ್ಜ ಯಾವುದೇ ವಿಲ್ ಮಾಡಿಲ್ಲದ ಕಾರಣ ಅದನ್ನು ನೀವು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

17. ನಿಮಗೆ ಹಾಗೂ ನಿಮ್ಮ ತಂಗಿ ನಡುವೆ ಮಾನ್ಯ ಹಿರಿಯ ನ್ಯಾಯಾಲಯದಲ್ಲಿ ಅ.ದಾ.ನಂ.31/2019 ರಂತೆ ದಾವೆ ಇದೆ ಎಂದರೆ ಸರಿ. ಸದರಿ ದಾವೆಯಲ್ಲಿ ದಾವಾ ಸರ್ವೇ ನಂಬರ್ ಇಲ್ಲ ಎಂದರೆ ಸರಿ.

18. ನಿಡಿ - 1 ಮತ್ತು 2 ರಲ್ಲಿ ದಾವಾ ಸ.ನಂ.83 ರಲ್ಲಿ 1 ಎಕರೆ 37 ಗುಂಟೆ ನಮೂದು ಇಲ್ಲ.

19. ನೀವು ಹಾಜರುಪಡಿಸಿರುವ ಪಹಣಿಗಳಲ್ಲಿ ಸಹ ದಾವಾ ಸ್ವತ್ತು ಇಲ್ಲ ಎಂದರೆ ಸರಿ.

20. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಕಮಲಮ್ಮ ನವರು ಅಮೇರಿಕಾದಲ್ಲಿ ವಾಸವಿರುವ ಬಗ್ಗೆ ದಾಖಲೆ ನೀಡಿದ್ದೀರಾ ಎಂದರೆ, ಇಲ್ಲ.

21. ನಿಡಿ -13 ರ ಮತದಾರರ ಪಟ್ಟಿಯಲ್ಲಿ ತಹಶೀಲ್ದಾರ್ ಅಥವಾ ಚುನಾವನಾಧಿಕಾರಿಗಳ ಸಹಿ ಇದೆಯಾ ಎಂದರೆ, ಇಲ್ಲ ಜರಾಕ್ಸ್ ಕಾಫಿ ಎಂದು ನುಡಿಯುತ್ತಾರೆ. ಆ ಕಾರಣಕ್ಕೆ ಸದರಿ ದಾಖಲೆ ನೀವು ಸೃಷ್ಠಿ ಮಾಡಿರುವ ದಾಖಲೆ ಎಂದರೆ ಸರಿಯಲ್ಲ.

22. ನಿಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿದ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ವಾದಿಗೆ ತೊಂದರೆಯಾಗಲಿ ಎಂದು ಸುಳ್ಳು ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

23. ನೀವು ಕಟ್ಟುಕಥೆ ಕಟ್ಟಿ ವಾದಿಗೆ ತೊಂದರೆಯಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

24. ವಾದಿಗೆ ಸಹ ದಾವಾ ಆಸ್ತಿಯಲ್ಲಿ ಸಮಾನವಾದ ಭಾಗ ಇದೆ ಎಂದರೆ ಸರಿಯಲ್ಲ ಅವರಿಗೆ ಕೊಡಬೇಕಾದನ್ನು ನನ್ನ ಅಜ್ಜ ತಾತ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.) ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ